ಓ.ಎಸ್‌ಃ **೬೮/೨೦೨೦**

ಡಿ. ಡಬ್ಲ್ಯೂ ಃ 01

<u>ಸಾಕ್ಷಿಗೆ ದಿನಾಂಕ **23.09.2025** ರಂದು ಪ್ರಮಾಣ ವಚನ ನೀಡಲಾಯಿತು.</u>

<u>ಪಾಟೀಸವಾಲುಃ ವಾದಿ ಪರ ವಕೀಲರಿಂದ</u>

ಐಟಂ ನಂ.2 ಸರ್ವೆ ನಂ.31 ನನ್ನ ಹೆಸರಿಗೆ, ಐಟಂ ನಂ.3 ಸರ್ವೆ ನಂ.139 ನನ್ನ ತಾಯಿಯ ಹೆಸರಿಗೆ ನನ್ನ ತಂದೆಯ ಒಪ್ಪಿಗೆ ಮೇರೆಗೆ 1984-85 ರಲ್ಲಿ ಖಾತೆ ಮಾಡಲಾಗಿತ್ತು ಎಂದರೆ ಸರಿ. ಐಟಂ ನಂ.1 ಸರ್ವೆ ನಂ.104 ರಲ್ಲಿ 9 ವರೆ ಗುಂಟೆ ರೈಲ್ವೆ ಇಲಾಖೆಗೆ ಭೂಸ್ವಾಧೀನವಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು 16 ಲಕ್ಷ ಪರಿಹಾರದ ಹಣ ಬಂದಿರುತ್ತದೆ ಸುಮಾರು 5 ವರ್ಷಗಳಾಗಿರಬಹುದು ಎಂದು ನುಡಿಯುತ್ತಾರೆ. ನಾನು ವಾದಿಗೆ ಭೂಪರಿಹಾರದ ಹಣವನ್ನು ನೀಡಲು ಹೋಗಿದ್ದು ವಾದಿ ಸಂಪೂರ್ಣ ಹಣ ನನಗೆ ಬೇಕೆಂದು ಜಗಳ ಮಾಡಿರುತ್ತಾರೆ. ನನ್ನ ಸಹೋದರರಾದ ಕೃಷ್ಣೇಗೌಡ ಹಾಗೂ ಬಲರಾಮನಿಗೆ ತಲಾ 5 ಲಕ್ಷ ಹಣ ನೀಡಿರುತ್ತೇನೆ. ದಿ.30.07.2019 ರಲ್ಲಿ ನಾನು 2 ಮತ್ತು 3 ನೇ ಪ್ರತಿವಾದಿಗಳು ಒಂದು ಹಕ್ಕು ಖುಲಾಸೆ ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಗಳಿಗೆ ರೂ.50,000/- ಹಣವನ್ನು ನಾನು ನೀಡಿರುತ್ತೇನೆ ಎಂದು ಒಕ್ಕಣೆ ಇರುತ್ತದೆ ಎಂದರೆ ಸಾಕ್ಷಿ ಸಾಕ್ಷಿ ಮುಂದುವರೆದು ಮನೆಯ ಬಾಬ್ತು ನಾನು ರೂ.50,000/- ಹಣ ನೀಡಿರುತ್ತೇನೆ ಎಂದು ನುಡಿಯತ್ತಾರೆ. ನಮ್ಮ ಕುಟುಂಬದಲ್ಲಿ ಬಾಯಿಮಾತಿನ ಮುಖಾಂತರ ವಿಭಾಗವಾಗಿ ದಾವಾ ಸ್ವತ್ತುಗಳು ನನ್ನ ಭಾಗಕ್ಕೆ ಬಂದಿದ್ದ ಪಕ್ಷದಲ್ಲಿ 2 ಮತ್ತು 3 ನೇ ಪ್ರತಿವಾದಿಗಳು ನನಗೆ ಹಕ್ಕು ನಿವೃತ್ತಿ ಅಥವಾ ಹಕ್ಕು ಖುಲಾಸೆ ಪತ್ರವನ್ನು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಬರೆದುಕೊಡುವ ಪ್ರಮೇಯವೇ ಬರುವುದಿಲ್ಲ ಎಂದರೆ ಸರಿಯಲ್ಲ. ಹಕ್ಕು ಖುಲಾಸೆ ಪತ್ರವನ್ನು ನಾನು ಮತ್ತು ನನ್ನ ಸಹೋದರರು ಸೇರಿ ನಮ್ಮ ಅನುಕೂಲಕ್ಕೆ ತಕ್ಕಂತೆ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಐಟಂ ನಂ.1 ಸರ್ವೆ ನಂ.104 ರಲ್ಲಿ ವಿಸ್ತೀರ್ಣ 3 ಎಕರೆಯನ್ನು ನನ್ನ ತಂದೆ ದಿ.11.12.1972 ಮತ್ತು 04.08.1977 ರ ಕ್ರಯಪತ್ರದಂತೆ ಖರೀದಿಸಿರುತ್ತಾರೆ ಎಂದರೆ ಸರಿ. ನನ್ನ ತಂದೆ

ಜೀವಿತಾವಧಿಯಲ್ಲಿ ನಮ್ಮ ಕುಟುಂಬದಲ್ಲಿ ಬಾಯಿ ಮಾತಿನಂತೆ ಭಾಗವಾಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ರೈಲ್ವೆ ಭೂಸ್ವಾಧೀನ ಪರಿಹಾರ ಹಣವನ್ನು ವಾದಿಗೆ ಕೊಡಲು ಹೋಗಿರುವುದಿಲ್ಲ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಯಾವುದೇ ಬಾಯಿಮಾತಿನ ವಿಭಾಗವಾಗಿರುವುದಿಲ್ಲ ಬಹುತೇಕ ಸ್ವತ್ತುಗಳ ಖಾತೆಯ ಸ್ವತ್ತುಗಳು ನನ್ನ ಹೆಸರಿನಲ್ಲಿ ಮುಂದುವರೆಯುತ್ತಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿ ಮತ್ತು ವಾದಿಯ ಗಂಡ ಖುದ್ದು ಹಾಜರಿದ್ದ ಮೇರೆಗೆ ನಮ್ಮ ಕುಟುಂಬದಲ್ಲಿಇಂತಿಂತ ಜಮೀನುಗಳನ್ನು ಇಂತಿಂತವರ ಹಿಸ್ಸೆಗೆ ಬಿಡಲಾಗಿದೆ ಎಂದು ವಾದಿಯ ಗಂಡ ಚಲುವೇಗೌಡ ಬಂದು ಮಾತನಾಡಿ ಅದರಂತೆ ವಿಭಾಗ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ವಾದಿಗೆ ರೂ.50,000/- ಗಳ ಮರಮುಟ್ಟುಗಳನ್ನು ಖರೀದಿ ಮಾಡಿರುತ್ತೇನೆ ಎಂದರೆ ಸುಳ್ಳು, ನಮ್ಮ ಮನೆಗೆ ಖರೀದಿ ಮಾಡಿದ್ದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ರೂ.50,000/- ಹಣ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಮಕ್ಕಳ ವಿದ್ಯಾಭ್ಯಾಸಕ್ಕೆ ನಾನು ಯಾವುದೇ ಹಣ ಸಹಾಯ ಮಾಡಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಿಭಾಗವಾಗದೆ ಇದ್ದರೂ ವಾದಿಗೆ ಭಾಗಾಂಶ ನೀಡುವ ಉದ್ದೇಶದಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ